ಸದರಿ ನೌಕರರನ್ನು ಕೆಲಸದಿಂದ ತೆಗೆಯಬಾರದೆಂದು ಸರ್ವೋಚ್ಚ ನ್ಯಾಯಾಲಯ ತಡೆ ಆಜ್ಞೆ ಕೊಟ್ಟಿದ್ದರಿಂದ ಕೆಲಸದಲ್ಲಿ ಮುಂದುವರೆಸಲಾಗಿದೆ, ಅವರು ನಿರ್ವಹಿಸುವ ಕೆಲಸಗಳ ಖಾತೆಯಿಂದ ಅವರ ದಿನಗೂಲಿಯನ್ನು ಕೊಡಲಾಗುತ್ತಿದೆ. ಅವರು ನಿರ್ವಹಿಸಿದ ಕೆಲಸ ಮುಗಿದ ತಕ್ಷಣ ಬೇರೆ ಕೆಲಸವಿದ್ದರೆ ಅವರನ್ನು ಆ ಕೆಲಸದ ಮೇಲೆ ತೆಗೆದುಕೊಂಡು ಈ ಕೆಲಸದ ಖಾತೆಯಿಂದ ದಿನಗೂಲಿ ಕೊಡಬಹುದು. ಆದರೆ ಬದಲಿ ಕೆಲಸವಿಲ್ಲದಿದ್ದರೆ ಅವರನ್ನು ವಿಧಿಯಿಲ್ಲದೇ ಕೆಲಸದಿಂದ ತೆಗೆಯಬೇಕಾಗಿರುತ್ತದೆ. ಈಗ ಯೋಜನಾ ಕೆಲಸಗಳು ನಡೆಯುವ ಸ್ಥಳಗಳಲ್ಲಿ ಸಹ ಈ ಯೋಜನೆಗಳು ಕೊನೆಗೊಂಡನಂತರ ಯಾವುದೇ ಹೊಸ ಯೋಜನೆಗಳು ಇರಲಾರದು. ಆದ್ದರಿಂದ ಈ ಎಲ್ಲಾ ದಿನಗೂಲಿ ನೌಕರರ ಸೇವೆಯೂ ಖಾಯಂ ಮಾಡಿಸಲು ಆರ್ಹವಾಗಿಲ್ಲ.

ದಿನಗೂಲಿ ನೌಕರರು ಸಲ್ಲಿಸಿರುವ ರಿಟ್ ಅರ್ಜಿಗಳಲ್ಲಿ ಸರ್ವೋಚ್ಚ ನ್ಯಾಯಾಲಯ ಇನ್ನೂ ಅಂತಿಮ ತೀರ್ಪು ನೀಡಿರುವುದಿಲ್ಲ. ಈ ವಿಷಯದಲ್ಲಿ ಮುಂದಿನ ಕ್ರಮ ಜರುಗಿಸಲು ಸರ್ವೋಚ್ಚ ನ್ಯಾಯಾಲಯದ ಅಂತಿಮ ತೀರ್ಮಾನವನ್ನು ಕಾಯಲಾಗಿದೆ.

(೨) ದ. ಕ. ಜಿಲ್ಲೆಯ ರಿಕ್ಷಾ ಚಾಲಕರ ಬೇಡಿಕೆಗಳನ್ನು ಈಡೇರಿಸುವ ಬಗ್ಗೆ

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲಾ ಆಟೋರಿಕ್ಷಾ ಚಾಲಕರ ಸಂಘದವರು ಇತ್ತೀಚೆಗೆ ಜಿಲ್ಲಾಧಿಕಾರಿಗಳ ಕಚೇರಿಯ ಮುಂದೆ ಧರಣಿ ಸತ್ಯಾಗ್ರಹ ನಡೆಸಿದರಲ್ಲವೇ ಈ ಸಂದರ್ಭದಲ್ಲಿ ರಿಕ್ಷಾ ಮೀಟರ್ ದರವನ್ನು ಪರಿಷ್ಕರಿಸಬೇಕು ಹೊರಗಿನ ಪಟ್ಟಣಗಳ ರಹದಾರಿಯನ್ನು ಹೊಂದಿದ ರಿಕ್ಷಾಗಳು ಪರ್ಮಿಟ್ ನಿಯಮವನ್ನು ಸುರುಪಯೋಗಪಡಿಸದಂತೆ ಕ್ರಮ ತೆಗೆದುಕೊಳ್ಳಬೇಕು, ಪರವಾನಿಗಿ ಇಲ್ಲದೆ ಮಂಗಳೂರು ನಗರದಲ್ಲಿ ಓಡುತ್ತಿರುವ ರಿಕ್ಷಾಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಸತ್ಯಾಗ್ರಹದ ಮೇಳೆ ಬೇಡಿಕೆಗಳನ್ನು ಮುಂದಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯಲ್ಲವೇ ಆಟೋರಿಕ್ಷಾದವರಿಗೆ ಮಂಗಳೂರಿನಲ್ಲಿ ಸೂಕ್ತ ವ್ಯವಸ್ಥೆ ಮಾಡುತ್ತೀರಾ ಈ ಕುರಿತು ಮಾನ್ಯ ಸಾರಿಗೆ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು).—ಮಾನ್ಯ ಅಧ್ಯಕ್ಷರೇ, ಪ್ರಾದೇಶಿಕ ಸಾರಿಗೆ ಅಧಿಕಾರಿ, ಮಂಗಳೂರು ಅವರು ವರದಿ ಮಾಡಿರುವಂತೆ ದಕ್ಷಿಣ ಕನ್ನಡ ಜಿಲ್ಲಾ ಆಟೋರಿಕ್ಷಾ ಚಾಲಕ ಸಂಘದವರಿಂದ ಸತ್ಯಾಗ್ರಹದ ಬಗ್ಗೆ ಯಾವುದೇ ಮಾಹಿತಿ ಪ್ರಾದೇಶಿಕ ಸಾರಿಗೆ ಕಛೇರಿಗೆ ಬಂದಿರುವುದಿಲ್ಲ. ಆದರೆ ಅವರು ಮೀಟರ್ ದರ ಪರಿಷ್ಕರಣೆ ಮತ್ತಿತರ ಬೇಡಿಕೆಗಳ ಬಗ್ಗೆ ತಾರೀಖು ೧೯-೫-೮೮ರಂದು ಸತ್ಯಾಗ್ರಹ ಮಾಡುವುದಾಗಿ ವೃತ್ತ ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ದಿನಾಂಕ ೧೯-೫-೮೮ರಂದು ಜಿಲ್ಲಾ ಅಧಿಕಾರಿಗಳ ಎಚ್ಚರಿಕೆಯ ಮುಂಚೆ ಸತ್ಯಾಗ್ರಹ ಮಾಡಿದ್ದರು. ಆದರೆ, ಅವರ ಬೇಡಿಕೆಗಳ ಬಗ್ಗೆ ಪ್ರಾದೇಶಿಕ ಸಾರಿಗೆ ಕಚೇರಿಗೆ ಯಾವುದೇ ಮಾಹಿತಿ ಇಲ್ಲ, ಹಾಗೂ ಮಂಗಳೂರು ನಗರದಲ್ಲಿ ಪರವಾನಿಗೆ ಇಲ್ಲದೆ ಓಡಾಡುವ ಆಟೋರಿಕ್ಷಗಳ ಬಗ್ಗೆಯೂ ಯಾವುದೇ ದೂರುಗಳು ಬಂದಿಲ್ಲ. ಆದರೆ ಸೂರಕ್ಕಲ್ ಮತ್ತು ಮುಲ್ಕಿ ವ್ಯಾಪ್ತಿಯ ಆಟೋರಿಕ್ಷಾ ಪರವಾನಿಗೆದಾರರು ತಾಲ್ಲೂಕಿನಾದ್ಯಂತ ಓಡಾಡಲು ಅನುಮತಿ ಹೊಂದಿದ್ದು ಅವರು ಮಾತ್ರ ಮಂಗಳೂರು ನಗರದಲ್ಲಿ ಓಡಾಡುತ್ತಿದ್ದಾರೆ. ಈ ಬಗ್ಗೆ ತಾಲ್ಲೂಕು ಪರವಾನಿಗೆಗಳನ್ನು ಸಾರಿಗೆ ಪ್ರಾಧಿಕಾರವು ರದ್ದು ಮಾಡಿದ್ದರು. ಅದರ ಮೇಲೆ ಕರ್ನಾಟಕ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುತ್ತಾರೆ. ಉಚ್ಚ ನ್ಯಾಯಾಲಯವು ಕೆಲವು ಕೇಸುಗಳಲ್ಲಿ ತೀರ್ಪು ನೀಡಿದ್ದು ತಾಲ್ಲೂಕು ಪರವಾನಿಗೆ ರದ್ದು ಮಾಡಿದ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಆಜ್ಞೆಯನ್ನು ತಿರಸ್ಕರಿಸಿರುತ್ತಾರೆ. ಆದರೆ ಕೆಲವು ಕೇಸುಗಳಲ್ಲಿ ಇನ್ನೂ ಇತ್ಯರ್ಥಕ್ಕೆ ಬಾಕಿ ಇದೆ. ಈ ಬಗ್ಗೆ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ತನ್ನ ಸಭೆಯಲ್ಲಿ ಚರ್ಚಿಸಿ ಯಾವುದೇ ನಿರ್ಣಯ ತೆಗೆದುಕೊಂಡಿಲ್ಲ. ಆದರೆ ಆಟೋರಿಕ್ಷಾ ಪರವಾನಿಗೆಯ ವ್ಯಾಪ್ತಿಯ ನಿರ್ಣಯದ ಬಗ್ಗೆ ಸಾರಿಗೆ ಪ್ರಾಧಿಕಾರದ ಮುಂದೆ ಬಾಕಿ ಇರುತ್ತದೆ.

ಆಟೋರಿಕ್ಷಾಗಳಿಗೆ ಏಕರೂಪ ಬಾಡಿಗೆ ದರಗಳನ್ನು ನಿಗದಿಪಡಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಅಧ್ಯಕ್ಷರು.—ರಾಜೂಗೌಡರೆ, ನಿಮ್ಮದು ಕೊಳ್ಳೆಗಾಲ ತಾಲ್ಲೂಕಿನ ಹನೂರಿನ ಕಿರಿಯ ಕಾಲೇಜಿ ಬಗ್ಗೆ ಕೇಳಿ.

ಶ್ರೀ ಜಿ. ರಾಜೂಗೌಡ.—ಅದರ ಬಗ್ಗೆ ಕಾಲಿಂಗ್ ಅಟೆನ್‌ಷನ್ ಕೊಟ್ಟಿದ್ದೇನೆ.

(ಶ್ರೀ ಬಿ. ಗಂಗಣ್ಣ ಅವರು ಗೈರು ಹಾಜರಾಗಿದ್ದಾರೆ)

2. ರಾಜ್ಯದಲ್ಲಿ ದೇವದಾಸಿ ಪದ್ಧತಿಯನ್ನು ನಿಷೇಧಿಸುವ ಬಗ್ಗೆ,

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಅಧ್ಯಕ್ಷರೇ, ಸದ್ಯದಲ್ಲಿ ರಾಜ್ಯ ಮಟ್ಟದಲ್ಲಿ ನಡೆಯಿತೆನ್ನಲಾದ ಚರ್ಚಾಕೂಟದಲ್ಲಿ ವೇಶ್ಯಾವಾಟಿಕೆಯನ್ನು ನಿಷೇಧಿಸುವುದನ್ನು ವಿರೋಧಿಸಿ ನಡೆದಿರುವ ಚರ್ಚೆಯು ಸಮಾಜದ ದುರ್ಬಲ ಹಾಗೂ ಬಡತನದಲ್ಲಿ ಬಳಲುತ್ತಿರುವ ಅವಿದ್ಯಾವಂತ ಹೆಣ್ಣುಮಕ್ಕಳ ಜೀವನವನ್ನು ಮತ್ತಷ್ಟು ಅನಾರೋಗ್ಯಕ್ಕೆ ಎಡೆ ಮಾಡಿಕೊಟ್ಟು ಸಾರ್ವಜನಿಕ ಜೀವನದ ಆರೋಗ್ಯವನ್ನು ಕೆಡಿಸತಕ್ಕಂತಹ ಕಾರ್ಯಕ್ರಮವಾಗಬಹುದು.

ಬುದ್ಧಿಜೀವಿಗಳು ನಡೆಸಿರುವ ಈ ಚರ್ಚೆಯ ವಿಶ್ವದ ಅತ್ಯಂತ ಪ್ರಾಚೀನ ಕಾಲದಿಂದ ಬಂದಿರುವ ಈ ಅನಿಷ್ಟ ಪದ್ಧತಿಯನ್ನು ಹಲವಾರು ಸಂಘಸಂಸ್ಥೆಗಳು ಹೊಡೆದೋಡಿಸುವ ಪ್ರಯತ್ನವನ್ನು ಇಲ್ಲಿ ಸ್ಮರಿಸಬೇಕಾಗುತ್ತದೆ. ದೇವದಾಸಿ ಪದ್ಧತಿ ಹಾಗೂ ವೇಶ್ಯಾವಾಟಿಕೆಯ ನಿಷೇದಕ್ಕೆ ಬೆಂಬಲ ತೋರಿಸಿ ಚರ್ಚೆಯಲ್ಲಿ ಪಾಲ್ಗೊಂಡಿರುವ ಮಹನೀಯರು ಕೆಲವೊಂದು ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ಮುಖ್ಯವಾಗಿ ಈ ವೃತ್ತಿಯಲ್ಲಿ ಶೇಕಡಾ ೭೦ ರಿಂದ ೮೦ ಜನರು ಕರ್ನಾಟಕ ಹಾಗೂ ಮಹಾರಾಷ್ಟ್ರ ದವರೇ ಇದ್ದಾರೆಂದು ಸವಿಸ್ತಾರವಾಗಿ ತಿಳಿಸಿದೆಯೆಂದು ವರದಿಯಾಗಿದೆ. ಸರಕಾರದ ನೀತಿಯನ್ನು ಹಾಗೂ ದೇವದಾಸಿ ಹಾಗೂ ವೇಶ್ಯಾವಾಟಿಕೆಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವುದಕ್ಕಾಗಿ ಸರಕಾರದ ನಿರ್ದಿಷ್ಟ ಕಾರ್ಯಕ್ರಮ ಏನು ? ಈ ವೃತ್ತಿಗೆ ಬಲಿಯಾಗುವುದಕ್ಕೆ ಮುಖ್ಯ ಕಾರಣ ಸಮಾಜದಲ್ಲಿರುವ ಬಡತನ. ಈ ದಿಸೆಯಲ್ಲಿ ಬಡಜನರ ಜೀವನದಲ್ಲಿ ನೆಮ್ಮದಿ ತಂದಂ ಶಿಕ್ಷಣ ಕೊಟ್ಟು ಇಲ್ಲಿಯವರೆಗೆ ನಡೆದಿರುವ ಬಡ ಸಮಾಜದ ಹಿಂಸೆಗೆ ಪ್ರೇರಕವಾಗಿರುವ ಸಮಾಜಕ್ಕೆ ತಿಳುವಳಿಕೆ ನೀಡಿ ಒಂದು ವೇಳೆ ಈ ವೇಶ್ಯಾವಾಟಿಕೆ ಬೇಕಾದರೆ ಚರ್ಚೆಯಲ್ಲಿ ಪಾಲ್ಗೊಂಡಿರುವ ಮಹಾನುಭಾವರು ತಮ್ಮ ಮನೆತನದವರ ಯಾರನ್ನಾದರೂ ಈ ಕಾರ್ಯಕ್ಕೆ ಬಿಡಿಸಲು ಸಾಧ್ಯವೆ ಎಂಬ ವಿಷಯವನ್ನು ಕೂಡ ಪ್ರಸ್ತಾಪಿಸಬೇಕಾಗುತ್ತದೆ. ರಾಜ್ಯದಲ್ಲಿ ದೇವದಾಸಿ ಹಾಗೂ ವೇಶ್ಯಾವಾಟಿಕೆಯನ್ನು ತಡೆ ಹಿಡಿಯುವುದಕ್ಕಾಗಿ ಕಾರ್ಯಕ್ರಮವನ್ನು ಈಗಾಗಲೇ ಹಮ್ಮಿಕೊಳ್ಳಲಾಗಿದೆ. ಆದಕಾರಣ ಈ ದಿಸೆಯಲ್ಲಿ ಸಂಪೂರ್ಣ ವಿವರವಾದ ಹೇಳಿಕೆ ನೀಡಬೇಕೆಂದು ಸಮಾಜ ಕಲ್ಯಾಣ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಮಾನ್ಯ ಮಲ್ಲಾರಿಗೌಡ ಪಾಟೀಲರು ಒಂದು ವಾಖ್ಯೆಯನ್ನು ಬರೆದಿದ್ದಾರೆ, ಉತ್ತರ ಅವರೇ ಕೊಟ್ಟಿದ್ದಾರೆ. ಅವರು ಹೇಳಿರುವುದನ್ನು ನಾನು ಹೇಳುತ್ತೇನೆ. ..ರಾಜ್ಯದಲ್ಲಿ ದೇವದಾಸಿ ಹಾಗೂ ವೇಶ್ಯಾವಾಟಿಕೆಯನ್ನು ತಡೆಹಿಡಿಯುವುದಕ್ಕಾಗಿ ಕಾರ್ಯಕ್ರಮವನ್ನು ಈಗಾಗಲೇ ಹಮ್ಮಿಕೊಳ್ಳಲಾಗಿದೆ,, ಎಂದು. ಏನು ಹೇಳುತ್ತೀರಿ ಎಂದು ಕೇಳಿದ್ದಾರೆ. ಆದರೂ ಅವರಿಗೆ ಏನು ಮಾಡಿದ್ದೇವೆ ಎಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ನಿಮಗೆ ವಿಷಯ ಗೊತ್ತಿಲ್ಲ, ಗೊತ್ತಿಲ್ಲದೆ ಏಕೆ ಉತ್ತರ ಕೊಡುತ್ತೀರಿ.

ಅಧ್ಯಕ್ಷರು.—ಈ ವಿಷಯದಲ್ಲಿ ಮಧ್ಯೆ ಎದ್ದು ಮಾತನಾಡಬಾರದು ಎನ್ನುವುದೂ ನಿಮಗೆ ಗೊತ್ತಿಲ್ಲವೇ ?

ಶ್ರೀ ಎ. ಲಕ್ಷ್ಮೀಸಾಗರ್.—ವೇಶ್ಯಾವಾಟಿಕೆ ವಿಚಾರ ನನಗೆ ಗೊತ್ತಿಲ್ಲ ಎಂದು ಹೇಳಿದ್ದಾರೆ. ಅದನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಇದರ ಪಾಂಡಿತ್ಯದ ವಿಚಾರ ಮಾನ್ಯ ಮಲ್ಲಾರಿಗೌಡ ಪಾಟೀಲರಿಗೆ ಗೊತ್ತಿದ್ದರೆ ತುಂಬ ಸಂತೋಷ. ನಾವು ಏನು ಮಾಡಿದ್ದೇವೆ ಎನ್ನುವುದನ್ನು ಅವರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.